# ಲವಕುಶರ ದೇವಾಲಯ!





ಹಲವಾರು ವೈಶಿಷ್ಟ್ಯಗಳಿಗೆ ಪ್ರಸಿದ್ಧವಾಗಿರುವ ಕೇರಳದಲ್ಲಿ, ಲವಕುಶರಿಗಾಗಿ ಈ ಏಕೈಕ ದೇವಾಲಯವಿದೆ. ಇಲ್ಲಿ ಸೀತಾದೇವಿ, ಲವಕುಶರೊಂದಿಗೆ ಪೂಜೆಗೊಳ್ಳುತ್ತಾಳೆ! ಸಿತಾದೇವಿ ಲವಕುಶ ದೇವಾಲಯವೆಂದು ಹೆಸರಾಗಿರುವ ಈ ದೇವಾಲಯವಿರುವುದು ಕೇರಳದ ಸುಪ್ರಸಿದ್ಧ ಪ್ರವಾಸೀತಾಣವಾದ ವೈನಾಡಿನ ಸುಲ್ತಾನ್ ಬತೇರಿ ಬಳಿಯ ಪುಳ್ಪಲ್ಲಿಯಲ್ಲಿ. ಇಲ್ಲಿ ಹಿಂದೆ ವಾಲ್ಮೀಕಿ ಆಶ್ರಮವಿತ್ತೆಂದೂ, ಸೀತೆಯು ಇಲ್ಲಿಯೇ ಲವಕುಶರನ್ನು ಹೆತ್ತಳೆಂದೂ ಇಲ್ಲಿನ ಸ್ಥಳಪುರಾಣ ಹೇಳುತ್ತದೆ. ಈ ದೇವಾಲಯವನ್ನು ವೀರಕೇರಳವರ್ಮ ಪಳಸಿ ರಾಜನು ನಿರ್ಮಿಸಿದನು. ಈ ದೇವಾಲಯದಿಂದ ಒಂದು ಕಿ.ಮೀ ದೂರದಲ್ಲಿ ಜಡಯಟ್ಟುಕಾವು ಎಂಬ ಇನ್ನೊಂದು ದೇವಾಲಯವಿದ್ದು, ಶ್ರೀರಾಮನನ್ನು ನೋಡಿದಾಗ ಸೀತೆಯು ಭೂಮಿಯೊಳಗೆ ಹೋದ ಸ್ಥಳ ಇದೇ ಎಂದು ಹೇಳುತ್ತಾರೆ. ಆಗ ಶ್ರೀರಾಮನು ಅವಳ ಜಡೆ ಹಿಡಿದೆಳೆಯಲು ಅದು ಕೆದರಿಹೋಗಿ ಈ ಹೆಸರು ಬಂತೆಂದು ಹೇಳುತ್ತಾರೆ. ಇಲ್ಲಿ ತಲೆಗೂದಲು ಕೆದರಿದ ಸೀತೆಯ ವಿಗ್ರಹವಿದೆ. ಇಲ್ಲೊಂದು ಸಪ್ತಮಾತೃಕೆಯರ ಮಂದಿರವೂ ಇದೆ.

**ಚಿತ್ರ- ಬರಹ: ಡಾ.ಬಿ.ಆರ್.ಸುಹಾಸ್, ಬೆಂಗಳೂರು**



# ಗುಬ್ಬಚ್ಚಿ ಗೂಡು

ಕೊಪ್ಪಳದ ಶಿಕ್ಷಕರ ಕಲಾಸಂಘದವರು ಗಿಡಗಳನ್ನು ದತ್ತು ಪಡೆದು ಬೆಳಸಿದ್ದಾರೆ. ಇದೀಗ ತಮ್ಮ ಹಸಿರು ಶಾಲೆಯಲ್ಲಿನ ಗಿಡಗಳಿಗೆ ಗುಬ್ಬಚ್ಚಿ ಗೂಡು ಇರಿಸಿದ್ದಾರೆ. ಬಿಸಿಲಿನ ತಾಪದಿಂದ ಹಾಗೂ ಕಳೆದು ಹೋಗುತ್ತಿರುವ ಪಕ್ಷಿ ಸಂಕುಲವನ್ನು ರಕ್ಷಿಸಲು ಈ ಕಾರ್ಯಕ್ಕೆ ಮುಂದಾಗಿದ್ದಾರೆ. ಗುಬ್ಬಚ್ಚಿ ಗೂಡಿನಲ್ಲಿ ಪಕ್ಷಿಗಳಿಗೆ ತಿನ್ನಲು ಕಾಳು, ಕುಡಿಯಲು ನೀರು ಇಟ್ಟು ಪಕ್ಷಿಗಳಿಗೆ ಅನುಕೂಲವಾಗುವಂತೆ ಗೂಡುಗಳನ್ನು ತಯಾರಿಸಿ ಶಾಲೆಗಳಿಗೆ ಹಂಚಿದ್ದೇವೆ ಎಂದು ಶಿಕ್ಷಕರ ಕಲಾಸಂಘದ ಅಧ್ಯಕ್ಷ ರಾಮಣ್ಣ ಶ್ಯಾವಿ ಹೇಳುತ್ತಾರೆ.

**- ನಾಗರಾಜನಾಯಕ ಡಿ.ಡೊಳ್ಳಿನ, ಕೊಪ್ಪಳ**

# ಕುಲುವಿ ಅಡುಗೆ ಮನೆ



ಸಾಂಪ್ರದಾಯಿಕ ಕುಲುವಿ ಅಡುಗೆ ಮನೆಯ ಅಪರೂಪದ ಈ ಚಿತ್ರಣ ಹಿಮಾಚಲ ಪ್ರದೇಶದ ಮನಾಲಿಯ ಸಾಂಸ್ಕೃತಿಕ ಹಾಗು ಜಾನಪದ ಕಲಾ ಮ್ಯೂಸಿಯಂನಲ್ಲಿಡಿ. ಪ್ರಸಿದ್ಧ ಹಿಡಿಂಬ ದೇವಾಲಯದಿಂದ ಅನತಿ ದೂರದಲ್ಲಿರುವ ಈ ಸಂಗ್ರಹಾಲಯದಲ್ಲಿ ಅಳಿವಿನ ಅಂಚಿನಲ್ಲಿರುವ ಪ್ರಾದೇಶಿಕ ವಿಶೇಷಗಳನ್ನು ಸಂಗ್ರಹಿಸಿ ಇರಿಸಲಾಗಿದೆ.

**-ಎಸ್.ಪ್ರಭಾವತಿ, ಬೆಂಗಳೂರು**